ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 6, May-June, 2023, Pp 16-23.
©*IIMRD*, Mysuru
IIMRD JOURNALS
www.iimrd.com

# ಕರ್ನಾಟಕದಲ್ಲಿ ವೈಷ್ಣವ ಮತದ ಸೂಕ್ಷ್ಮ ಅವಲೋಕನ

**ಡಾ. ಎಲ್. ಪಿ. ರಾಜು***
*ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

***ಸಾರಾಂಶ:(Abstract)***

ಧರ್ಮವು ಒಂದು ಸಮಾಜದ ಸಾಮಾಜಿಕ ಮತ್ತು ನೈತಿಕ ವ್ಯವಸ್ಥೆಯ ವಿಧಿ, ನಿಯಮ, ನಿಷೇಧಗಳನ್ನು ವ್ಯಾಖ್ಯಾನಿಸುವ ಅಂಶಗಳನ್ನು ಒಳಗೊಂಡಿರುತ್ತದೆ. ಈ ಅಂಶಗಳ ನೆರವಿನಿಂದ ಸಮಾಜ ಅಗೋಚರ ರೂಪದ ತನ್ನ ನಂಬಿಕೆಗಳಿಗೆ ಒಂದು ಸಾಕಾರ ರೂಪಕೊಟ್ಟು ಅವನ್ನು ಗಟ್ಟಿಗೊಳಿಸುತ್ತದೆ. **"**ಧರ್ಮ ಎಂಬುದಕ್ಕೆ ಯಾವುದೇ ನಿರ್ದಿಷ್ಟ ವ್ಯಾಖ್ಯೆ ಅಥವಾ ವಿವರಣೆ ಇಲ್ಲ. ಬದಲಾಗಿ ಅದೊಂದು ಮಾನವನ ಜೀವನದ ಅವಿಭಾಜ್ಯ ಅಂಗ. ಆದ್ದರಿಂದ ಎಲ್ಲ ಧರ್ಮವನ್ನು ಒಂದು ಜನಸಮುದಾಯದ ಜೀವನಕ್ರಮ ಅಥವಾ ವಿಧಾನ ಎಂದು ಪರಿಗಣಿಸಲು ಸಾಧ್ಯವಿದೆ. ಅಂತೆಯೇ ಇಹಪರದ ವಿಶ್ಲೇಷಣೆ, ಲೌಕಿಕದಿಂದ ಪಾರಮಾರ್ಥಿಕದತ್ತ ನಡೆಯಲು ವ್ಯಕ್ತಿ ಇಟ್ಟುಕೊಳ್ಳಬೇಕಾದ ತಿಳಿವಳಿಕೆ, ಅನುಸರಿಸಬೇಕಾದ ಮಾರ್ಗ ಇತ್ಯಾದಿಗಳನ್ನು ಕುರಿತಂತೆ ಮಾನವನ ಬದುಕಿಗೆ ತಾತ್ವಿಕ ಚೌಕಟ್ಟನ್ನು ರೂಪಿಸುವುದೇ ಧರ್ಮ ಎಂದು ಹೇಳಬಹುದು.**"**[1]

***ಮುಖ್ಯಪದಗಳು (Keywords)*** *ಮತ-ಧರ್ಮ, ವೈಷ್ಣವ, ಧಾರ್ಮಿಕ ನಂಬಿಕೆ, ಆಚರಣೆಗಳು.*

**ಪೀಠಿಕೆ**

ಧರ್ಮದ ಪ್ರಧಾನ ಘಟಕಗಳಾಗಿ ಪೂಜ್ಯವಸ್ತು ಮತ್ತು ಪೂಜಾ ಕೈಂಕರ್ಯಗಳು ಕಂಡುಬರುತ್ತವೆ. ಇವೆರಡರ ಪರಸ್ಪರ ಪ್ರತಿಕ್ರಿಯೆಯ ಫಲವಾಗಿ ಪ್ರಪಂಚದಲ್ಲಿ ಅನೇಕ ಧರ್ಮಗಳು ಉದಯವಾದವು. ಸರ್ವ ಧರ್ಮಗಳು ಮಾನವನನ್ನು ಸಾಂಸಾರಿಕ ಸುಖ, ದುಃಖ ಪುನರ್ಜನ್ಮಗಳಿಂದ ಮುಕ್ತಗೊಳಿಸಿ ಮೋಕ್ಷ ಸಂಪಾದನೆಯ ಕುರಿತಾದ ಮಾರ್ಗಗಳನ್ನು ಬೋಧಿಸುತ್ತಾ ಬಂದಿವೆ. ಸಮಾಜದ ಶಿಶುವಾದ ಮನುಷ್ಯ ಧರ್ಮದ ಕಟ್ಟುಪಾಡು, ಸಂಪ್ರದಾಯ ಮತ್ತು ನಿಯಮ-ನಿಷೇಧಗಳನ್ನು ಚಾಚು ತಪ್ಪದೇ ಅನುಸರಿಸುತ್ತಾ ಬಂದಿದ್ದಾನೆ. ಧರ್ಮಕ್ಕೆ ನಿಷ್ಠೆ ವ್ಯಕ್ತಪಡಿಸುತ್ತಾ ದೇವರಲ್ಲಿ ನಂಬಿಕೆಯಿರಿಸಿ ಆ ಮೂಲಕ ಮೋಕ್ಷ ಸಂಪಾದನೆಯ ಅನ್ವೇಷಣೆಯಲ್ಲಿ ತೊಡಗಿಕೊಡಿದ್ದಾನೆ.

---

[1] ವೆಂಕಟರಾಮಣ್ಣ.ಬಿ. (2010). ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ. ಪು.268

*Please cite this article as: ಡಾ. ಎಲ್. ಪಿ. ರಾಜು.* (2023). ಕರ್ನಾಟಕದಲ್ಲಿ ವೈಷ್ಣವ ಮತ: ಅವಲೋಕನ ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 16-23.*

ಭಾರತವು ವಿವಿಧ ಮತಧರ್ಮಗಳ ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡ ದೇಶ. ಭಾರತದ ಧರ್ಮ ಒಂದು ಧಾರ್ಮಿಕ ಮಹಾಸಾಗರ. ಈ ಸಾಗರಕ್ಕೆ ಭಾರತದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಭಾಗಗಳಿಂದ ಬೇರೆ ಬೇರೆ ಕಾಲಗಳಲ್ಲಿ ಧಾರ್ಮಿಕ ವಿವೇಚನೆಯ ಪ್ರವಾಹಗಳು ಹರಿದು ಬಂದು ಸೇರಿವೆ."[2]. ಬೌದ್ಧ ಮತಧರ್ಮವು ಇಲ್ಲೇ ಹುಟ್ಟಿ ಜಗತ್ತಿನ ಬೇರೆ ಬೇರೆ ಭಾಗಗಳಿಗೂ ಹರಡಿವೆ. ಬಹು ಧರ್ಮೀಯ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಧರ್ಮಗಳು ಮಹತ್ತರವಾದ ಪಾತ್ರ ವಹಿಸಿವೆ. ಭಾರತವನ್ನು ಅನೇಕ ಮತಧರ್ಮಗಳ ತವರುಮನೆ ಎನ್ನಲಾಗುತ್ತದೆ. ಇಲ್ಲಿ ಸ್ಥಾಪಿಸಲ್ಪಟ್ಟ ಪ್ರತಿಯೊಂದು ಮತ–ಧರ್ಮಗಳೂ ಚರಿತ್ರೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿ, ಅಂದಂದಿನ ಸಮಾಜ–ಸಂಸ್ಕೃತಿಗಳ ಮೇಲೆ ತಮ್ಮದೇ ಆದ ಪ್ರಭಾವಗಳನ್ನು ಬೀರಿವೆ. ಅವು ಸಂಗತವೋ ಅಸಂಗತವೋ, ಅಂತು ಅವು ಸಮಾಜ–ಸಂಸ್ಕೃತಿಗಳ ಮೇಲೆ ಪ್ರಭಾವ ಬೀರಿರುವುದಂತೂ ಸತ್ಯ.

ಮೂಲತಃ ಅಮೂರ್ತವಾದ ಈ ಧರ್ಮ ಮೂರ್ತ ರೂಪ ಪಡೆದುಕೊಳ್ಳುವುದು ಅನೇಕ ಸಂಘ ಸಂಸ್ಥೆಗಳ ಆಚಾರ ಮತ್ತು ಸಂಪ್ರದಾಯಗಳ ಮೂಲಕ. ವೈವಿಧ್ಯಮಯವಾದ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ದೇವಾಲಯಗಳು, ಮಠಗಳು, ಅಗ್ರಹಾರಗಳು, ಬಸದಿ, ಚರ್ಚು, ಮಸೀದಿಗಳು ಇದಕ್ಕಾಗಿಯೇ ಹುಟ್ಟಿಕೊಂಡವು. ದಂಡ ಮತ್ತು ಧರ್ಮಶಕ್ತಿಗಳನ್ನು ಸಮನ್ವಯಗೊಳಿಸಿಕೊಂಡು ಸ್ಥಾಪಿಸಲ್ಪಟ್ಟ ರಾಜಮನೆತನಗಳು ಅದನ್ನು ರಕ್ಷಿಸುವ ಗುರಿ ಇಟ್ಟುಕೊಂಡವು. ಮಾತ್ರವಲ್ಲ ವಿವಿಧ ಧರ್ಮಗಳು ಇಹ ಪರದ ವಿಶ್ಲೇಷಣೆ, ಲೌಕಿಕದಿಂದ ಪಾರಮಾರ್ಥಿಕದತ್ತ ನಡೆಯಲು ವ್ಯಕ್ತಿಯು ಇಟ್ಟುಕೊಳ್ಳಬೇಕಾದ ತಿಳಿವಳಿಕೆ ಅನುಸರಿಸಬೇಕಾದ ಮಾರ್ಗ, ಇತ್ಯಾದಿಗಳನ್ನು ಕುರಿತಂತೆ ಮನುಷ್ಯನ ಬದುಕಿಗೆ ತಾತ್ವಿಕ ಚೌಕಟ್ಟನ್ನು ರೂಪಿಸಿಕೊಳ್ಳುವ ಪ್ರಯತ್ನವನ್ನು ತಮ್ಮ ತಮ್ಮ ನೆಲೆಯಲ್ಲಿ ಕಾಲಕಾಲಕ್ಕೆ ಮಾಡುತ್ತ ಬಂದಿವೆ.

ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಪ್ರತಿಯೊಂದು ರಾಜ್ಯದ ಕೊಡುಗೆಗಳು ಅದರ ಇತಿಹಾಸದ ಪರಿಪೂರ್ಣತೆಗೆ ಸಹಕರಿಸಿವೆ. ಅಂತೆಯೇ ಕರ್ನಾಟಕದ ಅನೇಕ ಮತ–ಧರ್ಮಗಳ ಐತಿಹ್ಯದಲ್ಲಿ ವೈಷ್ಣವ ಮತದ ಆಳ ಅಗಲಗಳನ್ನು ವಿಸ್ತೃತವಾಗಿ ನೋಡುವ ಸಂದರ್ಭವು ಕೆಳಗಿನ ವಿಷಯಗಳನ್ನು ಪ್ರಸ್ತಾಪಿಸಲು ಅನುವು ಮಾಡುತ್ತದೆ.

**ವೈಷ್ಣವ ಧರ್ಮ**

ವೈಷ್ಣವ ಧರ್ಮದ ಇತಿಹಾಸ ಭಾರತೀಯ ಇತಿಹಾಸದೊಂದಿಗೆ ಅವಿಚ್ಛಿನ್ನವಾಗಿ ಹೆಣೆದುಕೊಂಡಿದೆ. ಕ್ರಿ.ಪೂ. 4ನೆಯ ಶತಮಾನದಲ್ಲಿ ವೈದಿಕ ಧರ್ಮವು ಬೌದ್ಧಧರ್ಮವನ್ನೆದುರಿಸಲಾಗದೆ, ಆ ಸಂದರ್ಭದಲ್ಲಿ ಬಹು ಜನಪ್ರಿಯವಾಗುತ್ತಿದ್ದ ಭಾಗವತ ಧರ್ಮದೊಡನೆ ಸ್ನೇಹವನ್ನು ಬೆಳೆಸಲು ಸಿದ್ಧವಾಯಿತು. ಅದರ ಫಲವಾಗಿ ವೈದಿಕ ಸಾಹಿತ್ಯದ ವಿಷ್ಣುವನ್ನು ಭಗವಂತನೊಡನೆ ಸಮೀಕರಿಸಬೇಕಾಯಿತು. ಇಲ್ಲಿಂದ ಮುಂದೆ ವೈಷ್ಣವ ಧರ್ಮವೆಂಬುದು ಭಾಗವತ ಧರ್ಮದ ಇನ್ನೊಂದು ಹೆಸರಾಗಿ ಪರಿಗಣಿತವಾಯಿತು.[3] ಅಂದರೆ ಕ್ರಿಸ್ತ ಪೂರ್ವದ ಕಾಲದಿಂದಲೂ ವೈಷ್ಣವ ಪಂಥವು ಅಸ್ತಿತ್ವದಲ್ಲಿದ್ದು, ಕೃಷ್ಣ, ವಿಷ್ಣು, ಕೇಶವ, ಮಾಧವ ಮೊದಲಾದ

[2] ದೇಜಗೌ (ಸಂ). (2010). ಜಿ.ಹನುಮಂತರಾವ್ ಅವರ ಆಯ್ದ ಲೇಖನಗಳು, ಪುಟ.1.

[3] ಚಿದಾನಂದಮೂರ್ತಿ. ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.164.

ಹೆಸರುಗಳಿಂದ ದೇವರನ್ನು ಆರಾಧಿಸುವ ಪದ್ಧತಿ ಆರಂಭವಾಯಿತು. ವಿಷ್ಣುವಿನ ಹತ್ತು ಅವತಾರಗಳಲ್ಲಿ ಯಾವುದನ್ನೇ ಪೂಜಿಸಲಿ ಈ ಧರ್ಮವು ಮುಖ್ಯವಾಗಿ ಏಕದೇವೋಪಾಸನೆಯನ್ನು ಎತ್ತಿ ಹಿಡಿಯುತ್ತದೆ.[4] ಭಾರತೀಯ ಪರಂಪರೆಯ ಐತಿಹಾಸಿಕ ಮಹಾಕಾವ್ಯಗಳೆಂದು ಪ್ರಸಿದ್ಧವಾಗಿರುವ ರಾಮಾಯಣ ಮಹಾಭಾರತಗಳೂ ಸಹ ವೈಷ್ಣವ ಪಂಥದ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ.

ಪ್ರಾಚೀನ ಕರ್ನಾಟಕದಲ್ಲಿ ವೈಷ್ಣವಧರ್ಮವು ಶೈವ ಧರ್ಮದಷ್ಟೇ ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ. ವಿಷ್ಣುವಿನ ಆರಾಧನೆಯನ್ನೇ ಪ್ರಮುಖ ಉದ್ದೇಶವಾಗಿಟ್ಟುಕೊಂಡದ್ದು, ವೈಷ್ಣವ ಧರ್ಮ. ವಿಶಿಷ್ಟಾದ್ವೈತ, ದ್ವೈತ ಮತಗಳು ವೈಷ್ಣವಧರ್ಮ ಪ್ರಸಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು. ಕರ್ನಾಟಕದಲ್ಲಿ ವೈಷ್ಣವಧರ್ಮವು ಪ್ರಮುಖವಾಗಿ ಮೂರು ನೆಲೆಗಳಲ್ಲಿ ಬೆಳೆದು ಬಂದಿರುವುದನ್ನು ಕಾಣಬಹುದು. ಅವುಗಳೆಂದರೆ, "ಮೊದಲನೆಯದು ವೈದಿಕ–ಭಾಗವತ ಮೂಲದ ವೈಷ್ಣವ ಧರ್ಮ ಕ್ರಿ.ಶ. ಮೊದಲ ಹತ್ತು ಅಥವಾ ಹನ್ನೊಂದು ಶತಮಾನಗಳಲ್ಲಿ ಪ್ರಚುರವಾಗಿದ್ದಿರಬಹುದು. ಎರಡನೆಯದು ರಾಮಾನುಜರು ಕರ್ನಾಟಕಕ್ಕೆ ಬರುವ ಮೊದಲೇ ಅಲ್ಪಸ್ವಲ್ಪ ಮಟ್ಟಿಗೆ ಪರಿಚಿತವಾಗಿದ್ದ ಆಳ್ವಾರರ ವೈಷ್ಣವ ಧರ್ಮ, ರಾಮಾನುಜರ ಆಗಮನದೊಂದಿಗೆ ಶ್ರೀ ವೈಷ್ಣವ ಧರ್ಮ 11–12ನೇಯ ಶತಮಾನದಲ್ಲಿ ಹೆಚ್ಚು ಪ್ರಚಾರವನ್ನು ಪಡೆದು ಮುಂದೆ ವೈಭವದಿಂದ ಬೆಳೆಯಿತು. ಮೂರನೆಯದು ಕರ್ನಾಟಕದ ದಕ್ಷಿಣ ಕನ್ನಡ ಪ್ರಾಂತದಿಂದ ಹುಟ್ಟಿಬಂದ ಮಧ್ವಾಚಾರ್ಯರಿಂದ (ಕ್ರಿ.ಶ. 13ನೇ ಶತಮಾನ) ಬೆಳೆದು ಬಂದ ಮಾಧ್ವ ಸಂಪ್ರದಾಯ, ಮುಂದೆ ಹರಿದಾಸ ಪರಂಪರೆಯಾಗಿ ಸಮೃದ್ಧವಾಗಿ ಬೆಳೆಯಿತು"[5]. ವಿಷ್ಣುವಿನ ಆರಾಧನೆಯನ್ನೇ ಪ್ರಮುಖ ಉದ್ದೇಶವಾಗಿಟ್ಟುಕೊಂಡದ್ದು ವೈಷ್ಣವ ಧರ್ಮ. ವಿಶಿಷ್ಟಾದ್ವೈತ, ದ್ವೈತ ಮತಗಳು ವೈಷ್ಣವಧರ್ಮ ಪ್ರಸಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು. ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಹಾಗೂ ಮಧ್ವಾಚಾರ್ಯರು ದ್ವೈತ ಮತ ಪ್ರಸಾರ ಮಾಡಿದ ಪ್ರವರ್ತಕರು.

ವೈಷ್ಣವರೆಲ್ಲರೂ ಒಂದೇ ಧರ್ಮದವರಾದರೂ ಅವುಗಳಲ್ಲಿ ವಿವಿಧ ಪಂಥಗಳನ್ನು ಗುರ್ತಿಸಬಹುದು. ವೈಷ್ಣವ ಧರ್ಮದಲ್ಲಿ ನಾಲ್ಕು ಪ್ರಸಿದ್ಧ ಸಂಪ್ರದಾಯಗಳಿವೆ. "ಶ್ರೀ ವೈಷ್ಣವ ಸಂಪ್ರದಾಯ, ಬ್ರಹ್ಮ ಸಂಪ್ರದಾಯ, ರುದ್ರ ಸಂಪ್ರದಾಯ ಮತ್ತು ಸನಕ ಸಂಪ್ರದಾಯ. ಶ್ರೀವೈಷ್ಣವ ಸಂಪ್ರದಾಯದ ಪ್ರಧಾನ ಆಚಾರ್ಯರು ಶ್ರೀ ರಾಮಾನುಜರು–ವಿಶಿಷ್ಟಾದ್ವೈತ; ಬ್ರಹ್ಮ ಸಂಪ್ರದಾಯದ ಆಚಾರ್ಯರು ಆನಂದತೀರ್ಥರು (ಮಧ್ವ) – ದ್ವೈತ; ರುದ್ರ ಸಂಪ್ರದಾಯದ ಆಚಾರ್ಯರು ಶ್ರೀ ವಿಷ್ಣು ಸ್ವಾಮಿ ಮತ್ತು ಅವರ ಅನುಯಾಯಿಯಾದ ವಲ್ಲಭರು–ಶುದ್ಧಾದ್ವೈತ; ಸನಕ ಸಂಪ್ರದಾಯದ ಆಚಾರ್ಯರು ಶ್ರೀ ನಿಂಬಾರ್ಕರರು–ದ್ವೈತಾದ್ವೈತ. ಚೈತನ್ಯ ಸಂಪ್ರದಾಯವು ಮಾಧ್ವಮತದ ಒಂದು ಶಾಖೆಯಾಗಿರುತ್ತದೆ. ಆದರೂ ಸಹ ದಾರ್ಶನಿಕ ದೃಷ್ಟಿಯಿಂದ ಈ ಮತದವರು ದ್ವೈತವಾದಕ್ಕಿಂತ ಬೇರೆಯಾದ 'ಅಚಿಂತ್ಯಾಭೇದಾಭೇದ'ವನ್ನು ಅಂಗೀಕರಿಸುತ್ತಾರೆ".[6] ಅದೂಅಲ್ಲದೆ ಶ್ರೀ ವೈಷ್ಣವರಲ್ಲೇ 2 ಪಂಥಗಳನ್ನು ಗುರುತಿಸಬಹುದು.

---

[4] ಅದೇ., ಪು.165

[5] ಮಂಜುನಾಥ. ಸಿ. ಯು., ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ. ಪು.98

[6] ಬಲದೇವ ಉಪಾಧ್ಯಾಯ (ಮೂ.). ರಾಮಚಂದ್ರಶಾಸ್ತ್ರಿ. ಎಸ್ (ಅನು.). (1970). ಭಾರತೀಯ ದರ್ಶನ. ಪು.420.

1. ತೆಂಕಲೈ: ದಕ್ಷಿಣದವರು, ಶ್ರೀರಂಗಂ, ತಮಿಳು.

2.ವಡಗಲೈ: ಉತ್ತರದವರು, ಕಾಂಚೀಪುರಂ, ಸಂಸ್ಕೃತ.

ಶ್ರೀರಂಗಂ ತಮಿಳುನಾಡಿನ ದಕ್ಷಿಣ ಭಾಗದಲ್ಲಿರುವುದರಿಂದ ಅಲ್ಲಿನ ಶ್ರೀವೈಷ್ಣವರನ್ನು ತೆಂಕಲೈ ಎಂದು ಕರೆಯುತ್ತಾರೆ. ಇವರು ಸ್ಥಳೀಯ ತಮಿಳು ಭಾಷೆಗೆ ಪ್ರಾಮುಖ್ಯತೆ ನೀಡಿದರು. ಕಾಂಚಿಪುರಂ ತಮಿಳುನಾಡಿನ ಉತ್ತರ ಭಾಗದಲ್ಲಿರುವುದರಿಂದ ಅಲ್ಲಿನ ಶ್ರೀವೈಷ್ಣವರನ್ನು ವಡಗಲೈ ಎಂದು ಕರೆಯುತ್ತಾರೆ. ಇವರು ಸಂಸ್ಕೃತ ಭಾಷೆಗೆ ಪ್ರಾಮುಖ್ಯತೆ ನೀಡಿದರು. ತೆಂಕಲೈಯವರು ಇಂಗ್ಲಿಷ್ ಭಾಷೆಯ 'ಯು' ಆಕಾರದ ನಾಮ ಧರಿಸಿದರೂ 'ಯು' ಆಕಾರದ ಕೆಳಗೆ ಗೂಟದ ಚಿಹ್ನೆ ಇರುತ್ತದೆ. ಮಧ್ಯದಲ್ಲಿ ಕೆಂಪು ಬಣ್ಣದ ನಾಮ ಧರಿಸುತ್ತಾರೆ. ಆದುದರಿಂದ ಇದನ್ನು ಗೂಟದ ನಾಮ ಎಂತಲೂ ಕರೆಯುತ್ತಾರೆ. ವಡಗಲೈಯವರು 'ಯು' ಆಕಾರದ ಬಿಳಿಯ ನಾಮವನ್ನು ಮಧ್ಯದಲ್ಲಿ ಕೆಂಪು ನಾಮ ಅಥವಾ ಹಳದಿ ಬಣ್ಣದ ನಾಮ ಧರಿಸುತ್ತಾರೆ. ಈ ಎರಡೂ ನಾಮಗಳು ಬಿಳಿಯ ಬಣ್ಣದವಾಗಿದ್ದು ಶ್ರೀಮನ್ನಾರಾಯಣನ ಪಾದ ಎಂತಲೂ, ಮಧ್ಯದ ಕೆಂಪು ನಾಮವು ಸಾಕ್ಷಾತ್ ಲಕ್ಷ್ಮಿ ಎಂತಲೂ ಗ್ರಹಿಸುತ್ತಾರೆ. ಇವರಿಬ್ಬರಿಗೂ ಬೌದ್ಧಿಕ ವಾತಾವರಣ, ಭಾಷೆಯ ಭೇದಕ್ಕನುಗುಣವಾಗಿ ತತ್ತ್ವಜ್ಞಾನದ ಅರ್ಥೈಸಿಕೊಳ್ಳುವಿಕೆಯಲ್ಲೂ ಅಭಿಪ್ರಾಯ ಭೇದವಿದೆ, ಆದರೂ ಶ್ರೀಮನ್ನಾರಾಯಣನ ಪಾರಮ್ಯವನ್ನು ಸರ್ವಸಮ್ಮತವಾಗಿ ಒಪ್ಪುತ್ತಾರೆ.

ಈ ವೈಷ್ಣವ ಮತವು 13–14ನೇ ಶತಮಾನದ ನಂತರ ಕರ್ನಾಟಕದ ಸಾಮಾಜಿಕ ಮತ್ತು ಧಾರ್ಮಿಕ ಪರಂಪರೆಯಲ್ಲಿ ಮಹತ್ತರವಾದ ಬದಲಾವಣೆಗಳಿಗೆ ಕಾರಣವಾಗಿದೆ ಮಧ್ಯಕಾಲೀನ ಕರ್ನಾಟಕದ ಸಂದರ್ಭದಲ್ಲಿ ಮುಸ್ಲಿಮರ ಆಗಮನದಿಂದಾಗಿ ಪದೇ ಪದೇ ಯುದ್ಧಗಳು ನಡೆಯುತ್ತಿದ್ದವು. ಅಲ್ಲದೆ ಸ್ಥಳೀಯ ರಾಜಮನೆತನಗಳೂ ಸಹ ಸಾಮ್ರಾಜ್ಯ ವಿಸ್ತರಣೆಯ ದೆಸೆಯಿಂದಾಗಿ ಯುದ್ಧವನ್ನು ಬಯಸುತ್ತಿದ್ದವು. ಇಂತಹ ಪ್ರಕ್ಷುಬ್ಧ ಸ್ಥಿತಿಯಲ್ಲಿ ಮಧ್ಯಕಾಲೀನ ಕರ್ನಾಟಕದ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳ ಮೇಲೆ ವೈಷ್ಣವ ಪಂಥವು ತನ್ನದೇ ಆದ ಮಹತ್ವದ ಪ್ರಭಾವವನ್ನು ಬೀರಿ ಅನೇಕ ಸ್ಥಿತ್ಯಂತರಗಳಿಗೆ ಕಾರಣವಾಯಿತು.

ಭಾಗವತ ಮೂಲದ ವಿಷ್ಣು ಪಾರಮ್ಯವನ್ನು ಸಾರುವ ವೈಷ್ಣವ ಧರ್ಮ ರಾಮಾನುಜರ ಕಾಲದಲ್ಲಿ ಶ್ರೀವೈಷ್ಣವ ಪಂಥವೆಂದೂ ಮಧ್ವಾಚಾರ್ಯರ ಕಾಲದಲ್ಲಿ ಮಾಧ್ವ ಸಂಪ್ರದಾಯವೆಂತಲೂ, ಹರಿದಾಸರ ಕೀರ್ತನೆಗಳ ಮುಖಾಂತರಜನರ ಮನೆ – ಮನ ತಲುಪಿದ್ದು ಮಾತ್ರ ಮಧ್ಯಕಾಲೀನ ಕರ್ನಾಟಕದ ಧಾರ್ಮಿಕ ಪರಿಚಯದ ಸ್ಥೂಲ ಚಿತ್ರಣ ಎನ್ನಬಹುದು. ಇವರು ನೆಲಸಲು ಶ್ರೀವೈಷ್ಣವ ದೇವಾಲಯಗಳು, ಅಗ್ರಹಾರಗಳು ಸ್ಥಾಪನೆಯಾಗಿ ಶ್ರೀವೈಷ್ಣವ ಧರ್ಮ ಪ್ರಚಾರ ಉತ್ತಮವಾಗಿಯೇ ಆಯಿತೆಂದರೆ ತಪ್ಪಾಗಲಾರದು. ಶ್ರೀರಾಮಾನುಜರ ಶ್ರೀವೈಷ್ಣವ ಪಂಥ, ಮಧ್ವಾಚಾರ್ಯರ ವೈಷ್ಣವ ಪಂಥ ಹಾಗೂ ಹರಿದಾಸರುಗಳ ಕೀರ್ತನೆಗಳ ಹರಿಯನ್ನು ರಾಜಮನೆತನಗಳು ಮಾನ್ಯ ಮಾಡಿದ್ದರಿಂದ ಸಾಮಾನ್ಯ ಜನರು, ಶ್ರೀಮಂತರು ಹಾಗೂ ಅಧಿಕಾರಿಗಳನ್ನು ಇದು ತನ್ನತ್ತ ಸೆಳೆದುಕೊಂಡಿತು. ಹಾಗಾಗಿ ಶಾಸನಗಳಲ್ಲಿ ಶ್ರೀಹರಿಯ ದಶಾವತಾರಗಳನ್ನು ದೊರೆಗಳಿಗೆ ಹೋಲಿಕೆಯಾಗುವಂತೆ ವರ್ಣಿಸಲಾಗಿದೆ. ರಾಜನನ್ನು ದೇವರಾದ ವಿಷ್ಣುವಿಗೆ, ಆತನ ದಶಾವತಾರಗಳಿಗೆ ಹೋಲಿಸಿ ರಾಜನನ್ನು ಭೂಮಿಯ ಮೇಲಿನ ದೇವರು ಎಂದು ದೇವರ ಸ್ಥಾನದಲ್ಲಿಡಲಾಯಿತು. "ವಿಷ್ಣು ಹಾಗೂ ಅವನ ಇತರೆ ಅವತಾರಗಳಲ್ಲಿ ನಂಬಿಕೆಯಿಟ್ಟು ಆರಾಧಿಸುವವರನ್ನು 'ವೈಷ್ಣ'ವರೆಂದು ಕರೆಯುತ್ತಾರೆ. ಈ ಪಂಥದವರಿಗೆ ಹರಿ, ನಾರಾಯಣ, ಕೃಷ್ಣ, ವೆಂಕಟೇಶ್ವರ,

ಪುರುಷೋತ್ತಮ, ಮಾಧವ, ಲಕ್ಷ್ಮಿ ಮೊದಲಾದ ರೂಪಗಳಲ್ಲಿ ವಿಷ್ಣುವನ್ನು ಆರಾಧಿಸುವ ಕ್ರಮವಿದೆ. ವೈಷ್ಣವರು ಹರಿಯೇ ಪರಮಸತ್ಯ, ಜಗತ್ತು ಮಿಥ್ಯವಲ್ಲ 'ಸತ್ಯವೇ' ಎಂಬ ಸಿದ್ಧಾಂತವನ್ನು ಮಂಡಿಸುತ್ತಾರೆ."[7] ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ 'ಶ್ರೀ ವೈಷ್ಣವ' ಎಂಬ ಪದದಲ್ಲಿ ಪೂರ್ವ ಪ್ರತ್ಯಯವಾಗಿ ಬಳಸಲ್ಪಡುವ 'ಶ್ರೀ' ಎಂಬ ಪ್ರತ್ಯಯವು ಇತ್ತೀಚಿನ ಅನೇಕ ಶಾಸನಗಳಲ್ಲಿ, ಅದರಲ್ಲೂ ಮುಖ್ಯವಾಗಿ ದಕ್ಷಿಣಕರ್ನಾಟಕದ ಒಳನಾಡಿನಲ್ಲಿ ದೊರೆತಿರುವ ಶಾಸನಗಳಲ್ಲಿ ರಾಮಾನುಜರ ಅನುಯಾಯಿಗಳು ಹಿಂದೆ ಹೇಳಿದ್ದಕ್ಕಿಂತಲೂ ವಿಭಿನ್ನವಾಗಿ, ವೈಷ್ಣವ ಧರ್ಮದ ಅವಿಚ್ಛಿನ್ನ ಭಕ್ತರು ಎಂಬ ಅರ್ಥವನ್ನು ಬಹುಶಃ ಸೂಚಿಸುತ್ತಿರುವಂತೆ ತೋರುತ್ತದೆ. 'ವೈಷ್ಣವ ಚಕ್ರವರ್ತಿ', 'ವೈಷ್ಣವ ಚೂಡಾಮಣಿ', 'ವೈಷ್ಣವ ಪಂಥದ ಸಾರೋತ್ಕರ್ಷ' ಮೊದಲಾದ ಅಸಂಖ್ಯಾತ ವ್ಯಕ್ತಿ ಚಿತ್ರಗಳು ಅನೇಕ ದಾಖಲೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

ವೈಷ್ಣವ ಧರ್ಮವು ರಾಮಾನುಜರು ಕರ್ನಾಟಕಕ್ಕೆ ಆಗಮಿಸಿದ ನಂತರ ಭದ್ರವಾಗಿ ನೆಲಸಿತು. ಹೊಯ್ಸಳ ಸಾಮ್ರಾಜ್ಯವು ಈ ಧರ್ಮವನ್ನು ಸ್ವಾಗತಿಸಿತು. ರಾಮಾನುಜಾಚಾರ್ಯರ ಆಗಮನದೊಂದಿಗೆ ಕನ್ನಡ ನಾಡಿಗೆ ತಮಿಳುನಾಡಿನಿಂದ ಆಗಮಿಸಿದ ಶ್ರೀವೈಷ್ಣವ ಬ್ರಾಹ್ಮಣ ಕುಟುಂಬಗಳು ಇಲ್ಲೇ ನೆಲೆ ನಿಂತವು. ಜೊತೆಗೆ ಸ್ಥಳೀಯ ಜನರ ಮೇಲೂ ಅಪಾರ ಪ್ರಭಾವ ಬೀರಿದರು. "ರಾಮಾನುಜರು ದಲಿತ ವರ್ಗದವರನ್ನು ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಉನ್ನತ ಮಟ್ಟಕ್ಕೇರಿಸಲು ಪ್ರಯತ್ನ ಪಡುತ್ತಿದ್ದು ಅವರ ಸ್ನೇಹಿತರಂತೆ ಚಿತ್ರಿತರಾಗಿದ್ದಾರೆ. ಅವರು ಜಾತಿ ಮತ್ತು ಅಂತಸ್ತುಗಳ ಎಲ್ಲೆಯನ್ನು ಮೀರಿ ಬ್ರಾಹ್ಮಣೇತರರಾದ ಪಿಳ್ಳೈ ಉರಂಗಾವಿಲ್ಲಿ ದಾಸರಂತಹ ಶಿಷ್ಯರನ್ನು ಹೊಂದಿದ್ದರು"[8] ಎಂದರೆ ಆ ಸಮಯಕ್ಕೆ ಬ್ರಾಹ್ಮಣ ವರ್ಗದ ನಂತರದ ಜಾತಿ–ಮತಗಳು ಬಹಳ ಕೆಳಮಟ್ಟದ್ದಾಗಿದ್ದು ಅವುಗಳನ್ನು ಉತ್ತಮ ಮಟ್ಟಕ್ಕೇರಿಸಲು ಪ್ರಯತ್ನಿಸಿದ ರಾಮಾನುಜರ ಕಾರ್ಯವು ಸಾಂಸ್ಕೃತಿಕ–ಧಾರ್ಮಿಕ ಸ್ಥಿತ್ಯಂತರವೆಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಶ್ರೀವೈಷ್ಣವ ಧರ್ಮವನ್ನು ಜನಪ್ರಿಯಗೊಳಿಸಿ ಜನಸಾಮಾನ್ಯರ ಮನೆ–ಮನ ತಲುಪಿಸಲು ಮಾಡಿದ ಕಾರ್ಯದಂತೆ ಕಾಣುತ್ತದೆ.

ತಮಿಳುನಾಡಿನ ಬ್ರಾಹ್ಮಣೇತರ ಕುಟುಂಬಗಳು ಮತ್ತು ಬ್ರಾಹ್ಮಣ ಕುಟುಂಬಗಳು "ನಿಷ್ಠಾವಂತರೂ, ವಿದ್ವಾಂಸರೂ ಆದ ಭಟ್ಟಾರ್, ಹೆಬ್ಬಾರ್, ಹೆಮ್ಮಿಗೆ, ಕಡಾಂಬಿಯಾರ್, ಕಂದಾಡೆ, ನಲ್ಲಾನ್ ಚಕ್ರವರ್ತಿ ಮೊದಲಾದ ತಮಿಳು ಮನೆತನದವರೂ ಕೆಲವು ಬ್ರಾಹ್ಮಣೇತರ ವರ್ಗದವರೂ"[9] ರಾಮಾನುಜರ ಮತಾಂತರೀಕರಣ ಪ್ರಕ್ರಿಯೆಗೆ ಆಧಾರಗಳಾಗಿವೆ. ಅಂದರೆ ಮತಾಂತರಗೊಂಡ ವೈಷ್ಣವರನ್ನು, ಮೂಲ ವೈಷ್ಣವರನ್ನು ಜವಾಬ್ದಾರಿಯುತವಾಗಿ ನಡೆಸಿಕೊಳ್ಳುವ ಕಾರ್ಯ ಆ ಸಮಾಜಕ್ಕಿತ್ತು. ವೈಷ್ಣವ ಧರ್ಮದಲ್ಲಿ ರಾಮಾನುಜರು ಜಾರಿಗೆ ತಂದ ಅಂತ್ಯಜರಿಗೆ ವೈಷ್ಣವ ದೀಕ್ಷೆ ನೀಡುವುದು ಮತ್ತು ದೇವಾಲಯಗಳಿಗೆ ಪ್ರವೇಶ ಕಲ್ಪಿಸಿದ್ದು ಅಂದಿನ ಧಾರ್ಮಿಕ ಕ್ಷೇತ್ರದಲ್ಲಿ ಬಹುಮುಖ್ಯ ಸ್ಥಿತ್ಯಂತರಕ್ಕೆ ಕಾರಣವಾಯಿತು. ಸಮಾಜವನ್ನು ಅವಲಂಬಿಸಿದ ಧರ್ಮಕ್ಕೆ ಸಾಂಸ್ಕೃತಿಕ ಭದ್ರತೆಯನ್ನು ಒದಗಿಸಿಕೊಟ್ಟ ಕೀರ್ತಿ ಆ ಕಾಲದ ಸಮಾಜಕ್ಕೆ

---

[7] ವೆಂಕಟರಾಮಣ್ಣ.ಬಿ. (2010). ವಿಜಯನಗರ ಇತಿಹಾಸಕ್ಕೆ ಕೋಲಾರಜಿಲ್ಲೆಯ ಕೊಡುಗೆ, ಪು.275

[8] ಹರಿದಾಸ ಭಟ್ಟಾಚಾರ್ಯ (ಸಂ). (1988) ಯುಗಯಾತ್ರಿ ಭಾರತೀಯ ಸಂಸ್ಕೃತಿ, ಸಂಪುಟ.4, ಪು.135.

[9] ಅದೇ., ಪು.135.

ಸಲ್ಲಬೇಕು. ಅವರವರ ಇಚ್ಛೆಗೆ ತಕ್ಕಂತೆ ಧಾರ್ಮಿಕ ಮಠ–ಮಂದಿರಗಳನ್ನು ನಿರ್ಮಿಸಿ ಅಪಾರ ದಾನ–ದತ್ತಿ ಬಿಟ್ಟ ಬಗ್ಗೆ ಶಾಸನ ಸಂಪುಟಗಳಲ್ಲಿ ಉಲ್ಲೇಖಗಳು ಕಂಡು ಬರುತ್ತವೆ.

ಮಧ್ವಾಚಾರ್ಯರು ಸಹ ವೈಷ್ಣವ ಪಂಥದ ಪ್ರಚಾರದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದರು. ಈ ಪಂಥವು ಮಾಧ್ವ ಸಿದ್ಧಾಂತ ಎಂತಲೇ ಪ್ರಸಿದ್ಧಿ ಪಡೆಯಿತಾದರೂ ಮಡಿವಂತಿಕೆಯಿಂದಾಗಿ ಪೂರ್ಣ ಯಶಸ್ಸು ಕಾಣಲಿಲ್ಲವಾದರೂ ಹರಿ ಪಾರಮ್ಯವನ್ನು ಬಹಳ ಉತ್ತಮವಾಗಿ ಪ್ರಚಾರಗೊಳಿಸಿದರು. ಇದು 14ನೇ ಶತಮಾನದ ನಂತರದ ವಿಜಯನಗರದ ಅರಸರ ಕಾಲದಲ್ಲಿ ಮತ್ತಷ್ಟು ಜನಪ್ರಿಯವಾಯಿತು. ಮಧ್ವಾಚಾರ್ಯರ ಶಿಷ್ಯರುಗಳಾದ ನರಹರಿತೀರ್ಥರು, ಪದ್ಮನಾಭತೀರ್ಥರು ಹಂಪೆಯಲ್ಲಿಯೇ ನೆಲಸಿ ವೈಷ್ಣವಧರ್ಮ ಪ್ರಚಾರಗೈದರು. ಮಧ್ವಾಚಾರ್ಯರ ಕಾಲಕ್ಕೆ ಹೋಲಿಸಿದರೆ, ಅವರತತ್ವ ಪ್ರಚಾರಗೈದವರಲ್ಲಿ ಶಿಷ್ಯರೇ ಮೇಲು. ಮಧ್ವರತತ್ವವನ್ನು ಪ್ರಚಾರ ಮಾಡಿದ್ದಲ್ಲದೆ ಬ್ರಾಹ್ಮಣೇತರರಿಗೂ ಮಾಧ್ವಮತ ದೀಕ್ಷೆ ನೀಡಿದರು. ಹಂಪಿಯನ್ನು ಕೇಂದ್ರವಾಗಿಟ್ಟುಕೊಂಡು ಮಾಧ್ವ ಸಿದ್ಧಾಂತವನ್ನು ಉತ್ಕೃಷ್ಟ ಮಟ್ಟಕ್ಕೇರಿಸಿದರು. ಬಳ್ಳಾರಿ ಜಿಲ್ಲೆಯ ಹಂಪಿ ಸಮೀಪದ ಆನೆಗೊಂದಿಯಲ್ಲಿ ತುಂಗಭದ್ರಾ ನದಿ ನಡುವೆ ಇರುವ ನವವೃಂದಾವನವು ಮಾಧ್ವ ಸಿದ್ಧಾಂತ, ಮತ ದೀಕ್ಷೆ ನೀಡುವ ಪ್ರಮುಖ ಸ್ಥಳವಾಗಿತ್ತು. ಜೊತೆಗೆ ದಾಸ ಸಾಹಿತ್ಯರಚನೆಯ ಕೇಂದ್ರವೂ ಆಗಿ ಹರಿ ಪಾರಮ್ಯ ತತ್ವಗಳು ಜನರ ಮನೆ–ಮನದಲ್ಲಿ, ಅಷ್ಟೇ ಏಕೆ ದಾಸರ ಪದಗಳು ಸಾಮಾನ್ಯ ಜನರ ಬಾಯಲ್ಲಿ ಪದವಾಗಿ ಹೊರ ಹೊಮ್ಮಿದವು. ಒಂದು ತತ್ವ ಸಿದ್ಧಾಂತವು ಕೆಳಮಟ್ಟದ ಜನರನ್ನು ತಲುಪಿದವೆಂದರೆ ಆ ಕಾರ್ಯವು ಸಾರ್ಥಕತೆ ಪಡೆದಂತೆಯೇ ಸರಿ.

ಮಧ್ವಾಚಾರ್ಯರ 'ಮಾಧ್ವ ಸಿದ್ಧಾಂತ'ವನ್ನು ಮತ್ತಷ್ಟು ಉನ್ನತ ಶಿಖರಕ್ಕೇರಿಸಿದವರು ಹರಿದಾಸರು. ಜೊತೆಗೆ ವಚನ ಚಳವಳಿಯ ನಂತರ ಶೂನ್ಯವಾಗಿದ್ದ ಧಾರ್ಮಿಕ ಪರಿಸರವನ್ನು ತೀವ್ರವಾಗಿ ಪ್ರಭಾವಿಸಿದವರು ಹರಿದಾಸರು. ಶ್ರೀಪಾದರಾಜರು, ವ್ಯಾಸರಾಜರು, ವಾದಿರಾಜರು ಮೊದಲಾದವರು ಶ್ರೀಹರಿ ಪಾರಮ್ಯವನ್ನೂ ವೈಷ್ಣವ ಪಂಥವನ್ನೂ ಪ್ರಚಾರಗೊಳಿಸಿದರು. ವ್ಯಾಸತೀರ್ಥರೂ ಸಹ ಇದೇರೀತಿಯ ಭಾವನೆ ಹೊಂದಿದ್ದು ಜನಸಾಮಾನ್ಯರಷ್ಟೇ ಅಲ್ಲ ಭಕ್ತಿಯಿದ್ದ ಸಾಮಾನ್ಯ, ಬ್ರಾಹ್ಮಣೇತರ ವ್ಯಕ್ತಿಯನ್ನೇ ತನ್ನ ಶಿಷ್ಯನಾಗಿ ಸ್ವೀಕರಿಸಿ ವಿದ್ಯಾದಾನ ಮಾಡಿದರು. ವ್ಯಾಸತೀರ್ಥರ ಶಿಷ್ಯರಾಶಿಯಲ್ಲಿ ಪುರಂದರ–ಕನಕದಾಸರು ಮಹತ್ವದವರಾಗಿದ್ದು, ಪುರಂದರದಾಸರನ್ನು ಹಲವರು ಬ್ರಾಹ್ಮಣರಾಗಿದ್ದರು ಎಂತಲೂ ಇನ್ನೂ ಕೆಲವರು ಬ್ರಾಹ್ಮಣೇತರರು ಎಂದೂ ಹೇಳಿದ್ದಾರೆ. ಇನ್ನು ಕನಕದಾಸರನ್ನು ವ್ಯಾಸತೀರ್ಥರು ಶಿಷ್ಯರಾಗಿ ಸ್ವೀಕರಿಸಿದ್ದು ಧಾರ್ಮಿಕ ಸಂಚಲನವೇ ಸರಿ. ಬ್ರಾಹ್ಮಣೇತರನಾದ ಕನಕನು ವ್ಯಾಸತೀರ್ಥರಿಂದ ದೀಕ್ಷೆ ಪಡೆದು ಶಿಷ್ಯನಾದನು. ಇದರಿಂದ ವ್ಯಾಸತೀರ್ಥರೇ ಟೀಕೆಗೆ ಒಳಗಾದರು ಎಂದು ಪುರಂದರದಾಸರ ಕೀರ್ತನೆಗಳಲ್ಲಿ ಕಾಣಬಹುದು. "ಕನಕದಾಸರ ಮೇಲೆ ದಯೆ ಮಾಡಲು ವ್ಯಾಸಮುನಿಯ ಮಠದವರೆಲ್ಲ ಮಾರಿಕೊಂಬುವರು" [10] ಎಂಬ ಕೀರ್ತನೆಯಲ್ಲಿ ಬ್ರಾಹ್ಮಣೇತರನಾದ ಕನಕನಿಗೆ ವಿದ್ಯೆ–ಸಂಸ್ಕಾರಗಳನ್ನು ಧಾರೆಯೆರೆದದ್ದು ಸತ್ಯ. ಅದಕ್ಕೆ ಮಠದಲ್ಲಿ ವಿರೋಧವೂ ಇತ್ತು ಎಂಬ ಅಂಶವು ಆ ಕಾಲದಧಾರ್ಮಿಕ ಪರಿಸ್ಥಿತಿಗಿಡಿದ ಕೈಗನ್ನಡಿ. ಅಂದರೆ ದೊರೆಗಳು–

[10] ನಾಗರತ್ನ.ಟಿ.ಎನ್. (ಸಂ), 2014, ಶ್ರೀ ಕನಕದಾಸರ ಕೀರ್ತನೆಗಳು, ಪೀಠಿಕೆ, xiv.

ಮಠಾಧಿಪತಿಗಳೇ ಬ್ರಾಹ್ಮಣೇತರರನ್ನು ತಮ್ಮ ಧರ್ಮೀಯನೆಂದು ಒಪ್ಪಿಕೊಂಡರೂ ಅವರ ಅನುಯಾಯಿಗಳು ಮಡಿವಂತಿಕೆಯನ್ನು ಪ್ರದರ್ಶಿಸಿದ್ದನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಅಂದು ಭಾರತವನ್ನು ಆಳ್ವಿಕೆ ಮಾಡುತ್ತಿದ್ದ ಮಹಮ್ಮದೀಯರ ಆಡಳಿತದಲ್ಲಿ ಸತ್ವ ಕಳೆದುಕೊಳ್ಳುತ್ತಿದ್ದ ವೈದಿಕ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸುವ ಹಾಗೂ ವಿವಿಧ ಮತಧರ್ಮಗಳು ಸೃಷ್ಟಿಸುತ್ತಿದ್ದ ತಲ್ಲಣಗಳಿಂದ ಜನಸಮುದಾಯವನ್ನು ವೈದಿಕ ಧರ್ಮದಲ್ಲೇ ಉಳಿಸಿಕೊಂಡು ಅವರಿಗೆ ಭಕ್ತಿಯ ಮಾರ್ಗದ ಮೂಲಕ ಸದ್ಗತಿಯನ್ನು ದೊರಕಿಸಿ ಕೊಡುವ ಮೂಲ ಗುರಿಯನ್ನು ಹರಿದಾಸ ಪರಂಪರೆ ಹೊಂದಿತ್ತು. ಅದರಲ್ಲೂ ವಚನ ಚಳವಳಿಯ ಕಾಲಘಟ್ಟದಲ್ಲಿ ತೀವ್ರವಾದ ಖಂಡನೆ, ವಿಡಂಬನೆಗೆ ಒಳಗಾಗಿದ್ದ ವೈದಿಕ ಮತದಲ್ಲಿ ಮತ್ತೆ ಜನರ ನಿಷ್ಠೆಯನ್ನು ಸ್ಥಾಪಿಸುವುದು ಹಾಗೂ ವಚನ ಚಳವಳಿ ಕಾರಣದಿಂದ ಒಂದು ರೀತಿಯಲ್ಲಿ ಜನಮಾನಸದಿಂದ ದೂರವೇ ಆಗಿದ್ದ ವೈದಿಕ ಮತದ ಪ್ರಾಮುಖ್ಯತೆಯನ್ನು ಮತ್ತೆ ಎತ್ತಿಹಿಡಿಯುವ ಮೂಲ ಉದ್ದೇಶವೂ ಈ ಪರಂಪರೆಗೆ ಇದ್ದುದನ್ನು ಕಾಣುತ್ತೇವೆ. ಜನ ಸಾಮಾನ್ಯರ ಭಾಷೆಯ ಮೂಲಕ ಧಾರ್ಮಿಕ ತತ್ವಗಳನ್ನು ಶೂದ್ರಾತಿ ಶೂದ್ರ ಸಮುದಾಯಗಳ ಬಳಿಗೆ ಕೊಂಡೊಯ್ದಿದ್ದ ವಚನ ಚಳವಳಿ, ಯಾವುದೇತತ್ವ ಸಿದ್ಧಾಂತ ತನ್ನ ಅನುಯಾಯಿಗಳನ್ನು, ಜನರನ್ನು ತಲುಪಬೇಕಾದರೆ ಅದು ಜನ ಭಾಷೆಯಲ್ಲಿರಬೇಕು ಎಂಬುದನ್ನು ತೋರಿಸಿ ಕೊಟ್ಟಿತ್ತು.

ವಚನ ಚಳವಳಿಯ ಪ್ರಭಾವದಿಂದ ಉಚ್ಚವರ್ಗದ ಶ್ರೇಷ್ಠತೆಯನ್ನೇ ಹಾಗೂ ವರ್ಣ ಸಂಕರ ವ್ಯವಸ್ಥೆಯ ಪ್ರತಿಪಾದನೆಯನ್ನೇ ಪ್ರಧಾನವಾಗಿ ಹೊಂದಿದ್ದ ವೈದಿಕ ಮತವು ಸಮಾಜದ ಶೂದ್ರಾತಿ ಶೂದ್ರವರ್ಗಗಳನ್ನು 'ಭಕ್ತಿ'ಯ ಮಾರ್ಗದ ಹೆಸರಲ್ಲಿ ತನ್ನ ತೆಕ್ಕೆಗೆ ತೆಗೆದುಕೊಂಡಿತು. ಇದಕ್ಕೆ ಹದಿನಾಲ್ಕನೇ ಶತಮಾನದಿಂದ 18ನೇ ಶತಮಾನದವರೆಗೆ ಇದ್ದ ಹರಿದಾಸರ ಹಾಗೂ ಈ ಹರಿದಾಸ ಪರಂಪರೆಯ ಕೊಡುಗೆ ಮಹತ್ತರವಾಗಿದೆ. ಇವರ ಭಕ್ತಿ ಪ್ರಧಾನವಾದದ್ವೈತ ಸಂಪ್ರದಾಯವು ಭಾರತದಲ್ಲೆಲ್ಲಾ ಭಕ್ತಿಪಂಥದ ಬೆಳವಣಿಗೆಗೆ ಕಾರಣವಾಯಿತು. ವೈಷ್ಣವಧರ್ಮವು ಭಾರತದಲ್ಲೆಲ್ಲಾ ಪ್ರಚಾರಕ್ಕೆ ಬಂದಿತು. "ಶ್ರೀ ವೈಷ್ಣವ, ಮಾಧ್ವ ಸಂಪ್ರದಾಯಗಳೆರಡೂ ವಿಜಯನಗರ ಸಾಮ್ರಾಜ್ಯದಲ್ಲೂ ರಾಜಧಾನಿಯಲ್ಲೂ ವೈಷ್ಣವ ಪಂಥ ಬೆಳೆಯಲು ಕಾರಣವಾದವು".[11] ವಿಜಯನಗರದಲ್ಲಿ ಶೈವ ಧರ್ಮವು ಉನ್ನತ ಶಿಖರದಲ್ಲಿತ್ತಾದರೂ, ಅರಸರು ಶ್ರೀವೈಷ್ಣವರಾಗಿ ದೀಕ್ಷೆಯನ್ನು ಪಡೆದಿದ್ದಾರೆ. "ಪಂಡರಪುರದ ವಿಠಲ ಮಂದಿರವು ಅನ್ಯಧರ್ಮೀಯರಿಂದ ಮುಚ್ಚಲ್ಪಟ್ಟು ಅಲ್ಲಿನ ವಿಠಲನನ್ನೇ ಹಂಪೆಗೆ ತಂದು ಪ್ರತಿಷ್ಠಾಪಿಸಿದರೆಂದು ಒಂದು ಹೇಳಿಕೆ ಇದೆ. ವೈಷ್ಣವ ಸಂತರಾದ ಚೈತನ್ಯ, ವಲ್ಲಭಾಚಾರ್ಯರು ಇದೇ ಕಾಲದಲ್ಲಿ ವಿಜಯನಗರಕ್ಕೆ ಬಂದು ಕೃಷ್ಣದೇವರಾಯನಿಂದ ಸನ್ಮಾನಿತರಾದರು. ವೈಷ್ಣವ ಪಂಥ ಸಾಮ್ರಾಜ್ಯದಲ್ಲಿ ಅಪಾರ ಪ್ರಭಾವ ಹೊಂದಿತ್ತು"[12] ಎಂಬುದು ಗಮನಾರ್ಹ ಸಂಗತಿಯಾಗಿದೆ. ಮುಂದೆ ಸುಮಾರು 18–19ನೆಯ ಶತಮಾನದವರೆಗೂ ಅನೇಕ ಹರಿದಾಸರಿಂದ ಈ ಮಾಧ್ವಮತವು ಪ್ರಚುರಗೊಂಡಿದ್ದು ಅದರ ಧೀರ್ಘಕಾಲಿಕ ಅಸ್ತಿತ್ವದ ಇತಿಹಾಸಕ್ಕೆ ಸಾಕ್ಷಿಯಾಗಿದೆ.

[11] ಹೊನ್ನು ಸಿದ್ದಾರ್ಥ.ಸಿ.ಬಿ.(ಪ್ರ.ಸಂ),ವಡ್ಡೆ ಹೇಮಲತಾ (ಸಂ), ಸಮಗ್ರಕನ್ನಡ ಸಾಹಿತ್ಯಚರಿತ್ರೆ ಸಂಪುಟ–4, ಭಾಗ.1, ಪುಟ.25

[12] ಹೊನ್ನು ಸಿದ್ದಾರ್ಥ.ಸಿ.ಬಿ.(ಪ್ರ.ಸಂ),ವಡ್ಡೆ ಹೇಮಲತಾ (ಸಂ),ಸಮಗ್ರಕನ್ನಡ ಸಾಹಿತ್ಯಚರಿತ್ರೆ ಸಂಪುಟ–4, ಭಾಗ.1, ಪುಟ.25

**ಪರಾಮರ್ಶನ ಗ್ರಂಥಗಳು**


- ಅನಸೂಯದೇವಿ. (2012). ವ್ಯಾಸಕೂಟ ಮತ್ತು ದಾಸಕೂಟ. ಸೃಷ್ಟಿ ಪ್ರಕಾಶನ, ಬೆಂಗಳೂರು.
- ಬಲದೇವ ಉಪಾಧ್ಯಾಯ (ಮೂ.), ರಾಮಚಂದ್ರಶಾಸ್ತ್ರಿ. ಎಸ್. (ಅನು.) (1970). ಭಾರತೀಯ ದರ್ಶನ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಚಿದಾನಂದಮೂರ್ತಿ. ಎಂ. (2014). ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. (ಐದನೇ ಮುದ್ರಣ) ಸಪ್ನ ಬುಕ್ ಹೌಸ್, ಬೆಂಗಳೂರು.
- ದೇಜಗೌ (ಸಂ.) (2010). ಜಿ. ಹನುಮಂತರಾವ್ ಅವರ ಆಯ್ದ ಲೇಖನಗಳು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಹರಿದಾಸ ಭಟ್ಟಾಚಾರ್ಯ (ಸಂ.), (1988). ಯುಗಯಾತ್ರಿ ಭಾರತೀಯ ಸಂಸ್ಕೃತಿ–ಸಂಪುಟ.4. ಪ್ರಸಾರಾಂಗ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು.
- ಹೊನ್ನು ಸಿದ್ಧಾರ್ಥ. ಸಿ. ಬಿ. (ಪ್ರ.ಸಂ.)., ವಡ್ಡೆ ಹೇಮಲತಾ (ಸಂ.). (2014). ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–4, ಭಾಗ–1, ಕನ್ನಡ ಅಧ್ಯಯನ ಸಂಸ್ಥೆ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
- ಮಂಜುನಾಥ. ಸಿ. ಯು. (2012). ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ. ಚಿತ್ಕಲ ಪ್ರಕಾಶನ, ಕುಪ್ಪಂ.
- ನಾಗರತ್ನ. ಟಿ. ಎನ್. (ಸಂ.) (2014) ಶ್ರೀ ಕನಕದಾಸರ ಕೀರ್ತನೆಗಳು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ರಾಮುಶೇಷನ್. ಎನ್. ಕೆ. (2010). ಹರಿದಾಸ ಆಂದೋಲನ. ಮಂಜುಳ ಪ್ರಕಾಶನ, ಮೈಸೂರು.
- ಶ್ರೀನಿವಾಸ ವಿಪಡಿಗಾರ್. (1996). ವಿಷ್ಣು ಕಲ್ಟ್ ಇನ್ ಕರ್ನಾಟಕ. ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.
- ವೆಂಕಟರಾಮಣ್ಣ. ಬಿ. (2010). ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.